

# ಚೀನೀಯರ ದೇವತಾ ಮನುಷ್ಯ

ಪುರಾತನ ಚೀನಾದ ಯೋಧ ಗ್ವಾನ್ ಯು ವಿನ ಬೃಹತ್ ಪ್ರತಿಮೆಯನ್ನು ಜಿಂಗ್ವಾ ನಗರದ ಹುಬೇಯ ಪ್ರಾಂತ್ಯದಲ್ಲಿ ಅನಾವರಣ ಮಾಡಲಾಗಿದೆ. ನೋಡಿದರೆ ಭಯವನ್ನುಂಟು ಮಾಡುವ ಗ್ರೀನ್ ಡ್ರಾಗನ್ ಕ್ರೆಸೆಂಟ್ ಬ್ಲೇಡ್ ಎನ್ನುವ ಕೊಡಲಿ ರೀತಿಯ ಆಯಧವನ್ನಿರಿಸಿಕೊಂಡಿರುವುದನ್ನು ಚಿತ್ರಿಸಲಾಗಿದೆ. ಗ್ವಾನ್ ಯು ಕ್ರಿಸ್ತ ಪೂರ್ವ 3 ನೇ ಶತಮಾನದಲ್ಲಿ ಸೇನಾಧಿಪತಿ(ಜನರಲ್)ಯಾಗಿದ್ದ. ಈ ಪ್ರತಿಮೆಯು 48 ಮೀಟರ್ ಎತ್ತರವಿದ್ದು 1320 ಟನ್ ನಷ್ಟು ತೂಕವಿದೆ. ಇದನ್ನು 10 ಮೀಟರ್‌ನಷ್ಟು ಎತ್ತರವಾದ ವೇದಿಕೆಯ ಮೇಲಿರಿಸಲಾಗಿದೆ.

ಜನರಲ್ ಗ್ವಾನ್ ಯು ನು ಚೀನಾ ಇತಿಹಾಸದಲ್ಲಿ ತ್ರೀ ಕಿಂಗ್‌ಡಮ್ಸ್ ಎಂದು ಕರೆಯಲ್ಪಟ್ಟ ಪ್ರಕ್ಷುಬ್ಧ ಕಾಲದಲ್ಲಿ ವಾಸವಾಗಿದ್ದ. ನಂತರ ಈ ದೇಶದ ಬಹಳಷ್ಟು ಪ್ರಸಿದ್ಧವಾದ 14 ನೇ ಶತಮಾನದ ಕಾದಂಬರಿ(ರೊಮಾನ್ಸ್ ಆಫ್ ದಿ ತ್ರೀ ಕಿಂಗ್‌ಡಮ್ಸ್)ಯಲ್ಲಿ ದೇವತಾ ಮನುಷ್ಯ ಎಂದು ಬಿಂಬಿತನಾಗಿದ್ದ. ಕೊನೆಗೆ ಒಂದರ್ಥದಲ್ಲಿ ಸಾಕ್ಷಾತ್ ದೇವರು ಎಂಬ ರೀತಿಯಲ್ಲಿಯೇ ದಕ್ಷಿಣ ಚೀನಿಯರಿಂದ ಪೂಜಿಸಲ್ಪಟ್ಟ. ಗ್ವಾನ್ ನ ನಿಜ ಜೀವನದಲ್ಲಾಗಿದ್ದ ಹಲವು ಘಟನೆಗಳು ಈಗಿನ ಸಾಕಷ್ಟು ಕಲ್ಪನಾ ಕಥೆಗಳಿಗೆ ದಾರಿ ಮಾಡಿಕೊಟ್ಟಿವೆ. ಈತ ಅತ್ಯಂತ ಪ್ರಾಮಾಣಿಕ ಹಾಗೂ ನಿಷ್ಪಕ್ಷಪಾತಿಯಾಗಿದ್ದರಿಂದ ಜನರಿಂದ ಬಹಳ ಗೌರವಿಸಲ್ಪಟ್ಟಿದ್ದ. ಅಂತೆಯೇ ಈತನ ಗುಡಿಗಳು ಹಾಗೂ ಪಾರಂಪರಿಕ ಚೈನಾದ ರೆಸ್ಟೊರೆಂಟ್, ಅಂಗಡಿಗಳಲ್ಲೆಲ್ಲಾ ಈತನ ಮೂರ್ತಿಗಳು ಸರ್ವವ್ಯಾಪಿಯಾಗಿರುವುದನ್ನು ನೋಡಬಹುದು. ಹುಬೇಯ ಪ್ರಾಂತ್ಯ ಅಲ್ಲದೆ ತವರೂರಾದ ಷಾಂಕ್ಷಿ ಪ್ರಾಂತ್ಯದಲ್ಲೂ ಗ್ವಾನ್ ಯು ನ ಮತ್ತೊಂದು ದೊಡ್ಡ ಪ್ರತಿಮೆಯನ್ನು ನಿಲ್ಲಿಸಲಾಗಿದೆ.

ಸುಯಿ ವಂಶದವರು ದೇವತೆ ಎಂದು ಭಾವಿಸಿದ್ದ ರೀತಿಯಂತೆಯೇ ಮೇಯ್ನ್ ಲ್ಯಾಂಡ್ ಚೈನಾ, ತೈವಾನ್, ಹಾಂಗ್ ಕಾಂಗ್ ಹಾಗೂ ಚೀನಿಯರು ವಾಸವಾಗಿರುವ ಸಾಗರೋತ್ತರ ದೇಶಗಳಲ್ಲಿನ ಜನರು ಇಂದಿಗೂ ಸಹ ಗ್ವಾನ್ ಯು ನ್ನು ಅತ್ಯಂತ ಪೂಜ್ಯಭಾವದಿಂದಲೇ ಆರಾಧಿಸುತ್ತಾರೆ.

■ ವಿದ್ಯಾವಿ. ಹಾಲಭಾವಿ

